ಹೇಳಿದರಂತೆ. ಮನೆಯವರೆಲ್ಲ ಕುಲದೇವರಿಗೆ ಹೋಗಿ ಬರೋಣ. ಕುಲದೇವರ ಹರಕೆ ತೀರಿಸಿದರೆ ಎಲ್ಲಾ ಸರಿಹೋಗಬಹುದು ಅಂತ ಅಣ್ಣ ಹೇಳೋಕೆ ಶುರು ಮಾಡಿದ್ದಾನೆ. ಕಷ್ಟಗಳು ಬಂದಾಗಲೇ ಎಲ್ಲರಿಗೂ ದೇವರು ನೆನಪಾಗೋದು. ನಮ್ಮ ಕುಲದೇವರು ಸಾತ್ವಿಕ ನರಸಿಂಹ ಸ್ವಾಮಿ. ಇರೋದು ಉಡುಪಿ ಹತ್ತಿರ ಯಾವುದೋ ಊರಿನ ಬಯಲಲ್ಲಂತೆ!. ಅಣ್ಣ ಸಣ್ಣವನಿದ್ದಾಗ ಒಂದ್ಸಲ ಅಜ್ಜನ ಜತೆ ಅಲ್ಲಿಗೆ ಹೋಗಿದ್ದನಂತೆ. ದೇವರು ಇರೋ ಊರು ಯಾವುದು ಅಂತ ಅವನಿಗೂ ಸರಿಯಾಗಿ ಗೊತ್ತಿಲ್ಲ. ಊರ ಹೆಸರನ್ನು ಡೈರಿಯಲ್ಲಿ ಬರೆದಿದ್ದೀನಿ ಅಂತಾನೆ. ಈಗ ಹೋಗಿ ಹುಡುಕಬೇಕು. ಅಲ್ಲಿ ಸಾಂಗೋಪಾಂಗವಾಗಿ ಪೂಜೆ ಮಾಡಿಸಬೇಕು. ಹರಕೆ ಸಲ್ಲಿಸಬೇಕು. ಅಲ್ಲಿಂದ ಬಂದ ಮೇಲೆ ನಮ್ಮ ಬಾಳೆಬೈಲಿನ ಪ್ರಾಣದೇವರ ಗುಡಿಯಲ್ಲಿ ನವಗ್ರಹ ಪೂಜೆ, ನಮ್ಮ ಮೂಲ ಮನೆಯಲ್ಲಿ ಪಿತೃ ಕೋಪಶಮನ ಕ್ರಿಯೆಗಳನ್ನು ಮಾಡಬೇಕು ಅಂತ ಅಣ್ಣ ತೀರ್ಮಾನಮಾಡಿದ್ದಾನೆ.ಪೂಜೆ,ಹೋಮ,ಗೋದಾನ, ಅನ್ನ ಸಂತರ್ಪಣೆ ಅಂತ ಹತ್ತು ಲಕ್ಷ ರೂಪಾಯಿಗಳಷ್ಟು ಖರ್ಚಿನ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಎಲ್ಲವೂ ಅಣ್ಣನ ನೆಮ್ಮದಿಗಾಗಿ. ಅದಕ್ಕಾಗಿ ಊರಿಗೆ ಬರ್ತಿದ್ದೀನಿ. ಮೊದಲು ನಾನೊಬ್ಬನೇ ಬರ್ತೀನಿ. ನನ್ನ ಹೆಂಡ್ತಿ, ಮಕ್ಳು, ಸೊಸೆಯಂದಿರು, ಮೊಮ್ಮಕ್ಕಳು ಫ್ಲೈಟ್‌ನಲ್ಲಿ ಮಂಗಳೂರಿಗೆ ಬಂದು ಪೂಜೆಗೆ ಜಾಯಿನ್ ಆಗ್ತಾರೆ...' ಎಂದ.

'ನಾನು ಬಾಳೆಬೈಲಿಗೆ ಹೋಗಿ ಹತ್ತನ್ನೆರಡು ವರ್ಷಗಳಾಗಿವೆ. ಅಣ್ಣನ ಮಕ್ಕಳು ಸತ್ತಾಗ ಬಂದಿದ್ದಾಗ ಹೋಗೋಕೆ ಆಗಲಿಲ್ಲ. ನಮ್ಮ ಹಿರಿಯರು ಬಾಳಿ ಬದುಕಿದ ಮನೆ ಬಿದ್ದು ಹೋಗೋ ಸ್ಥಿತಿಯಲ್ಲಿದೆ!. ಸುಮಾರು ನೂರೈವತ್ತು ವರ್ಷಗಳ ಹಿಂದೆ ಕಟ್ಟಿದ್ದು. ಬಚ್ಚಲು, ಕೊಟ್ಟಿಗೆ ಭಾಗ ಬಿದ್ದೋಗಿದೆ. ಅದನ್ನು ಕೆಡವಿ ಹೊಸದು ಕಟ್ಟಬೇಕು ಅಂತ ತೀರ್ಮಾನ ಮಾಡಿದ್ದೀನಿ. ಬಾಳೆಬೈಲಿಂದ ಬಂದ ಮೇಲೆ ಎಂಟ್ಹತ್ತು ದಿನ ಕೊಪ್ಪದಲ್ಲೇ ಇರ್ತೀನಿ. ನನ್ನ ತಮ್ಮ ಚಿದಂಬರ ಈಗ ಕೊಪ್ಪದಲ್ಲಿದ್ದಾನೆ. ಬಿಡುವು ಮಾಡಿಕೊಂಡು ನೀನು ಕೊಪ್ಪಕ್ಕೆ ಬರೋಕಾಗುತ್ತ?. ಒಂದೈದಾರು ದಿನ ನನ್ನ ಜತೆ ಇರು. ನಮ್ಮ ಕುಲದೇವರು ಇರೋ ಜಾಗ ಹುಡುಕೋದಕ್ಕೆ ನಿನ್ನ ಸಹಾಯ ಬೇಕು...' ಎಂದ.

'ಬರೀ ನನ್ನ ಗೋಳಿನ ಕಥೆ ಹೇಳಿ ನಿಂಗೆ ಬೇಸರ ಮಾಡಿದೆ ಸಾರಿ. ನೀನು ಹೇಗಿದ್ದೀಯ? ಮನೆಯಲ್ಲಿ ಎಲ್ಲರೂ ಹೇಗಿದ್ದಾರೆ' ಎಂದು ಔಪಚಾರಿಕವಾಗಿ ಕೇಳಿ ಉತ್ತರಕ್ಕೆ ಕಾಯದೆ, 'ಮೂರು ತಿಂಗಳ ಹಿಂದೆ ಗುಣವಂತೆ ನಾಗಭೂಷಣ ಫೋನ್ ಮಾಡಿದ್ನಯ್ಯ. ಅವನ ಕೊನೇ ಮಗನ ಮದುವೆಗೆ ಕರೆಯೋಕೆ. ನಿನ್ನೂ ಕೇಳ್ದ. ನಮ್ಮ ಜತೆ ಓದ್ತಿದ್ದ ಶಿವಸ್ವಾಮಿ, ಚಂದ್ರೇಗೌಡ, ರಾಮಭಟ್ಟರ ಮಗ ವೆಂಕ್ಟೇಶ, ನಾರ್ವೇಕರ್, ಆಗಸ್ಟಿನ್, ರಫೀಕ್ ಎಲ್ಲರೂ ಕೊಪ್ಪದಲ್ಲೇ ಇದ್ದಾರಂತೆ!. ನೀನು ಮುಂಬೈಯಲ್ಲಿ ಇರೋದು ಇಲ್ಲಿ ಯಾರಿಗೂ ಗೊತ್ತೇ ಇಲ್ಲ ಅಂದ. ದುಡ್ಡಿನ ಬೆನ್ನುಬಿದ್ದು ನೀನು ಸಣ್ಣ ಪುಟ್ಟ ಸಂತೋಷದ ಕ್ಷಣಗಳನ್ನು ಕಳಕಂಡಿದ್ದೀಯ ಅಂದ. ಅವನು ಹೇಳಿದ್ದರಲ್ಲಿ ನಿಜವಿದೆ. ವಿಷ್ಣು ಭಟ್ಟ, ನಾರ್ವೆ ಸೂರಿ, ಹಳೇಗದ್ದೆ ರಾಮಸ್ವಾಮಿ, ಹರಂದೂರು ದಿವಾಕರ ಸತ್ತದ್ದೂ ನಂಗೆ ಗೊತ್ತೇ ಆಗಲಿಲ್ಲ.'

'ಆರು ತಿಂಗಳ ಹಿಂದೆ ಓಪನ್ ಹಾರ್ಟ್ ಸರ್ಜರಿ ಮಾಡಿಸಿಕೊಂಡೆ. ಇನ್ನೆಷ್ಟು ದಿನ ಬದುಕಿರ್ತೀನೋ? ಬದುಕಿರುವಾಗಲೇ ನಮ್ಮ ಜತೆಯಲ್ಲಿ ಓದ್ತಿದ್ದವರು, ನೆಂಟರಿಷ್ಟರನ್ನು ನೋಡಬೇಕು...' ಅನ್ನಿಸ್ತಿದೆ ಎಂದು ಹೇಳಿ ಮತ್ತೇನು ಎಂದು ಕೇಳಿ, ಉತ್ತರಕ್ಕೆ ಕಾಯದೆ, 'ಮತ್ತೆ ಕಾಲ್ ಮಾಡ್ತೀನಿ. ನಾನು ಬಾ ಅಂದಾಗ ಹೊರಟು ಬರಬೇಕು. ಬಾಲ್ಗಡಿ ಗುಡ್ಡದ ಹತ್ರ ಒಂದು ಹೊಸ ರೆಸಾರ್ಟ್ ಶುರುವಾಗಿದೆಯಂತೆ. ಅಲ್ಲಿ ನಿಂಗೆ ರೂಮ್ ರಿಸರ್ವ್ ಮಾಡೋಕೆ ಚಿದಂಬರನಿಗೆ ಹೇಳ್ತೀನಿ. ಬರೋ ಮೊದಲು ಫೋನ್ ಮಾಡ್ತೀನಿ' ಎಂದು ಹೇಳಿ ಫೋನ್ ಆಫ್ ಮಾಡಿಕೊಂಡಿದ್ದ.

*

ವಿಶ್ವನಿಗೆ ಕೊಪ್ಪದ ಹೈಸ್ಕೂಲು ದಿನಗಳು ನೆನಪಾದವು. ಅಲ್ಲಿನ ಮುನಿಸಿಪಲ್ ಹೈಸ್ಕೂಲಿನಲ್ಲಿ ಎಂಟನೇ ತರಗತಿಗೆ ಸೇರಿಕೊಂಡ ಮೊದಲ ದಿನ ಪರಿಚಯವಾದವನು ಈ ಸತ್ಯ ಆಲಿಯಾಸ್ ಬಾಳೆಬೈಲು ಸತ್ಯಮೂರ್ತಿ. ತನ್ನ ಜಾತಿಯವರ ಫ್ರೀ ಹಾಸ್ಟೆಲಿನಲ್ಲಿದ್ದ. ಬೆಳಗಿನ ಹೊತ್ತು ಯಾವುದೋ ಅಂಗಡಿಯಲ್ಲಿ ಕೆಲಸ ಮಾಡಿ, ಮೇಲು ಖರ್ಚಿಗೆ ದುಡ್ಡು ಹೊಂದಿಸಿಕೊಳ್ತಿದ್ದ.

'ಪುಣ್ಯಾತ್ಮರು ಕಟ್ಟಿದ ಈ ಹಾಸ್ಟೆಲ್ ಇಲ್ಲದಿದ್ದರೆ ನಮ್ಮಂತೋರು ಓದೋಕೆ ಸಾಧ್ಯವಿತ್ತ...' ಅಂತ ಸತ್ಯ ದಿನಕ್ಕೆ ಒಂದು ಸಲವಾದರೂ ಅನ್ನದಾತ ಭಟ್ಟರುಗಳನ್ನು